1303(1092) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅನುಕಂಪದ ಹೆಸರಿನಲ್ಲಿ 151 ನಕಲಿ ನೌಕರರು ನೇಮಕಾತಿ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಓ.ಡಿ ತನಿಖೆ ನಡೆಸಲು ಕಾರ್ಮಿಕ ಸಚಿವರು ಕಳೆದ ಬಾರಿ ಅಧಿವೇಶನದಲ್ಲಿ ಭರವಸೆ ನೀಡಿದ್ದು ನಿಜವೆ, ಅದರಂತೆ ಈ ಪ್ರಕರಣವನ್ನು ಸಿ.ಓ.ಡಿ.ಗೆ ವಹಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು;

ಇ) 151 ನಕಲಿ ನೇಮಕಾತಿ ಆದೇಶಗಳಿಗೆ ಸಹಿ ಮಾಡಿದ ಅಧಿಕಾರಿಗಳು ಯಾರು;

ಈ) ಈ ಅವ್ಯವಹಾರಕ್ಕೆ ಕಾರಣವಾಗಿರುವ ಇಲಾಖೆಯ ಅಧಿಕಾರಿಗಳ ವಿರುದ್ಧ ಸರ್ಕಾರವು ಯಾವ ಶಿಸ್ತು ಕ್ರಮವನ್ನು ಕೈಗೊಳ್ಳಲಾಗಿದೆ;

ಉ) ಈ ಅಧಿಕಾರಿಗಳನ್ನು ಈಗ ಅವರುಗಳು ಸೇವೆ ಸಲ್ಲಿಸುತ್ತಿದ್ದ ಸ್ಥಳದಲ್ಲಿಯೇ ಮುಂದುವರಿಸಲಾಗಿದೆಯೇ. ಹಾಗಿದ್ದಲ್ಲಿ ಅಲ್ಲಿಯೇ ಮುಂದುವರಿಸಲು ಕಾರಣವೇನು:

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) :

ಅ) ಹೌದು.

ಸರ್ಕಾರಿ ಆದೇಶ ಸಂಖ್ಯೆ: ಒಇ 27 ಸಿಓಡಿ 2006, ದಿನಾಂಕ: 21.6.2006ರಲ್ಲಿ ಸಿ.ಓ.ಡಿ ಗೆ ವಹಿಸಲಾಗಿದೆ.

ಆ) ಅನ್ವಯಿಸುವುದಿಲ್ಲ.

ಇ) ಈ ಕೆಳಕಂಡ ಅಧಿಕಾರಿಗಳ ಸಹಿಗಳು ನಕಲಿ ಆದೇಶಗಳಲ್ಲಿ ಕಂಡು ಬಂದಿದೆ:

1) ಶ್ರೀ ಕೆ.ಎಸ್. ಮಹಾದೇವಪ್ಪ

2) ಶ್ರೀ ಬಿ. ರವೀಂದ್ರನಾಥ್

3) ಶ್ರೀ ಕೆ. ರಾಮಚಂದ್ರಪ್ಪ

ಈ) ತನಿಖೆಯನ್ನು ಸಿ.ಓ.ಡಿ ನಡೆಸುತ್ತಿದ್ದು, ವರದಿ ಬಂದ ನಂತರ ಈ ಪ್ರಕರಣದಲ್ಲಿ ಭಾಗಿಯಾಗಿರುವವರ ಮೇಲೆ ಕ್ರಮ ತೆಗೆದು ಕೊಳ್ಳಲಾಗುವುದು.

ಉ) ಶ್ರೀ ಮಹಾದೇವಪ್ಪರವರು ದಿನಾಂಕ : 31.12.2003 ರಂದೇ ನಿವೃತ್ತಿ ಹೊಂದಿರುತ್ತಾರೆ ಉಳಿದ ಇಬ್ಬರ ಮೇಲೆ ಇನ್ನು ಆಪಾದನೆ ಖಚಿತವಾಗಿಲ್ಲದ ಕಾರಣ ಸೇವೆಯಲ್ಲಿ ಮುಂದುವರಿಸಲಾಗಿದೆ. ಈ ಪ್ರಕರಣದಲ್ಲಿ ಯಾರು ಯಾರು ಭಾಗಿಯಾಗಿದ್ದಾರೆ ಎಂಬುದರ ಬಗ್ಗೆ ತನಿಖೆ ನಡೆಸಲು CODಗೆ ವಹಿಸಲಾಗಿದೆ.